10-00 A.M.

ಶ್ರೀ ಎ. ಆರ್. ಬದರಿನಾರಾಯಣ.—ಮರಿಯಪ್ಪ ಎನ್ನುವವರು ಏನು ಹೇಳಿದ್ದಾರೋ ಅದು ನನಗೆ ಗೊತ್ತಿಲ್ಲ, ಹರಿಜನ ಗಿರಿಜನ ವಿದ್ಯಾರ್ಥಿಗಳಿಂದ್ದ್ ಫೀಸ್‌ನ್ನು ವಸೂಲು ಮಾಡದಾರದು ಎನ್ನುತಕ್ಕಂಥಾದ್ದು ಬಹಳ ಕರೆಕ್ಟಾಗಿ ಇದೆ. ಅದನ್ನು ಯಾರಾದರೂ ತಪ್ಪಿ ನಡೆದರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೀರಭದ್ರಪ್ಪ.—ಈಗ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಊಟವನ್ನು ಇತ್ಯಾದಿಗಳಿಗೆ ಸಂಬಂಧಪಟ್ಟಹಾಗೆ ವಿದ್ಯಾರ್ಥಿ ವೇತನವನ್ನು ಏನು ಕೊಡುತ್ತಿದ್ದಾರೆ. ಅದು ಕಡಿಮೆ ಇದೆ. ಆದ್ದರಿಂದ ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎ. ಆರ್. ಬದರಿನಾರಾಯಣ.—ಇದು ಹೊಸ ಸಲಹೆ, ಅದನ್ನು ವಿಮರ್ಶೆ ಮಾಡುತ್ತೇವೆ.

SHORT NOTICE QUESTION AND ANSWER

Supply of Electricity to Tamilnadu

20. Sri M. S. KRISHNAN (Malleswaram).—

Will the Minister for Public Works and Electricity be pleased to state :—

(*a*) whether the Government of Tamilnadu has requested the Government of Mysore to give them more Electricity and power;

(*b*) if so, how-much power has been requested;

(*c*) whether the Government of Mysore has agreed to give additional Electrical power to Tamilnadu;

(*d*) if so, how much ?

Sri H. M. CHANNABASAPPA (Minister for Public Works and Electricity).—

(*a*) Yes; an oral request for supply of power to Tamilnadu was made when the representatives of that Government and of the State Electricity Board recently visited Bangalore.

(*b*) No firm indication has been given.

(*c*) No.

(*d*) Does not arise in view of replay to clause (*c*).

ಶ್ರೀ ಎಂ. ಎಸ್. ಕೃಷ್ಣನ್.—ನ್ಯಾಯವು ನನ್ನ ಪ್ರಶ್ನೆಗೆ ಉತ್ತರವಾಗಿ ತಮಿಳುನಾಡಿನವರು ಓರರ್ ರಿಕ್ವೆಸ್ಟ್ ಮಾಡಿದ್ದರು ಎಂದು ಹೇಳಿದ್ದೀರಿ, ಅವರು ಓರರ್ ರಿಕ್ವೆಸ್ಟ್ ಏನು ಮಾಡಿದ್ದಾರೆ ಮತ್ತು ಎಷ್ಟು ಮಾಡಿದ್ದಾರೆ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಿಳುನಾಡಿನ ಚೀಫ್ ಸೆಕ್ರೆಟರಿಯವರು ಎಂ.ಎಸ್.ಇ.ಬಿ. ಚೇರ್ಮನ್ ಅವರು ಮತ್ತು ಇತರ ಅಧಿಕಾರಿಗಳು ನನ್ನನ್ನು ಭೇಟಿ ಮಾಡಿದ್ದರು. ಅವರು ನಮಗೆ ಎದ್ಯುಚ್ಛಕ್ತಿಯನ್ನು ಎಷ್ಟು ಕೊಡುವುದಕ್ಕೆ ಸಾಧ್ಯವೋ ಅಷ್ಟು ಕೊಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಎಷ್ಟು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಅವರು ಕೇಳಿದರು. ಅದಕ್ಕೆ ತಮ್ಮ ಅಭಿಪ್ರಾಯ ಏನು ಎಂದು ಅವರು ಕೇಳಲಿಲ್ಲವೇ? ಮತ್ತು ತಾವು ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೀರಾ ಎಂದು ನಮಗೆ ತಿಳಿದು ಬಂದಿದೆ. ಆದ್ದರಿಂದ ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಾಗ ಎಷ್ಟು ಕೊಡಬೇಕು ಎನ್ನುವ ಪ್ರಶ್ನೆಯೇ ಇಲ್ಲ.

Sri M. S. KRISHNAN.—Supplementary to (B) : Can I take it that even if afirm indication is given, the Government is not going to spare any electricity to the Tamil Nadu Government ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲಿಯೇ ವಿದ್ಯುಚ್ಛಕ್ತಿ ಇಲ್ಲದೇ ಇರುವಾಗ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಸಿ. ಬೈರೇಗೌಡ.—ಹಿಂದೆ ತಾವು ತುಂಗಭದ್ರಾದಿಂದ ಆಂಧ್ರಪ್ರದೇಶಕ್ಕೆ ನೀರು ಕೊಡುವುದಿಲ್ಲ ಎಂದು ಕ್ಯಾಬಿನೆಟ್ ತೀರ್ಮಾನ ಮಾಡಿ ಆ ಮೇಲೆ ಒಂದು ವಾರದ ನಂತರ ತಾವು ತೀರ್ಮಾನ ಮಾಡಿ ಆಂಧ್ರಕ್ಕೆ ನೀರನ್ನು ಬಿಟ್ಟಿದ್ದೀರಿ. ಈ ಸಂದರ್ಭದಲ್ಲಿ ತಾವು ಆ ರೀತಿ ನಡೆದುಕೊಳ್ಳುವುದಿಲ್ಲ ಎಂದು ಈ ಸದನಕ್ಕೆ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಪ್ಪೊತ್ತು ನಂಬಿಕೆ ಇರುವಾಗ ಭರವಸೆ ಕೊಟ್ಟು ಏನು ಪ್ರಯೋಜನ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನ್ಯಾಯ (ಈ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಮಿಳುನಾಡು ಸರ್ಕಾರದ ಹಾಗೂ ಆ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಪ್ರತಿನಿಧಿಗಳು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದಾಗ ತಮಿಳುನಾಡಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆಂದು ಮುಖತಃ ಕೋರಿದ್ದರು ಎಂದು ಹೇಳಿದ್ದೀರಿ, ಅವರು ಆ ರೀತಿ ಕೇಳಿದಾಗ ತಾವು ಮುಖತಃ ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಏತಕ್ಕೆ ಹೇಳಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಕೊಡುತ್ತೇವೆ ಎಂದು ಹೇಳಲಿಲ್ಲ.

Mr. DEPUTY SPEAKER.—Now Question Hour is over

QUESTIONS FOR ANSWERS ON THE DAY

(But not taken up)

Ranebennur T.A.P.C. Marketing and Processing Society Ltd.

366. Sri K. B. KOLIWAD (Ranebennur).—

Will the Minister for Co-operation be pleased to state :—

(a) whether the Government is aware that all the books of Ranebennur Taluk Agriculture Produce Co-operative Marketing and Processing Society Ltd., are not recovered from the old management ;

(b) if so, the steps the Government has taken to recover the books ;

Sri A. SHANKARA ALVA (Minister for Co-operation).—

(a) Yes.